ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಸಣ್ಣ ನೀರಾವಾರಿ ರಾಜ್ಯ ಸಚಿವರು):-

ಅ) 1950ರಲ್ಲಿ ಪೂರ್ಣಗೊಳಿಸಲಾಯಿತು.

ಆ) ಕೊಮ್ಮನಾಳ ಗ್ರಾಮ 553ಎಕರೆ.

ಇ) -ಬಂದಿದೆ-

ಈ) -ನಿಜ-

ಉ) ಹೂಳು ತೆಗೆಯುವ ಕಾಮಗಾರಿಯು ಆರ್ಥಿಕವಾಗಿ ಸಾಧುವಲ್ಲವೆಂದುಕೊಂಡು ಬಂದಿರುವುದರಿಂದ ಈ ಕಾಮಗಾರಿ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ.

ಊ) 50 ಎಕರೆಗಳು, ಪರಿಶೀಲಿಸಲಾಗವುದು

ವಿಷಯ: ಗ್ರಾಮಗಳಿಗೆ ಐ.ಆರ್.ಡಿ.ಪಿ ಸಾಲ ಸೌಲಭ್ಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1559(1438)

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1)ರಾಷ್ಟ್ರೀಕೃತವಲ್ಲದ ವಾಣಿಜ್ಯ ಬ್ಯಾಂಕುಗಳ ಸೇವಾ ಪ್ರದೇಶಕ್ಕೆ ಸೇರಿದ ಗ್ರಾಮಗಳ ಐಆರ್‌ಡಿಪಿ ಫಲಾನುಭವಿಗಳಿಗೆ ಸಾಲ ಸೌಲಭ್ಯಗಳು ದೊರೆಯದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

2)ಹಾಗಿದ್ದಲ್ಲಿ ಈ ಸೌಲಭ್ಯ ಜನರಿಗೆ ದೊರೆಯುವಂತೆ ಮಾಡಲು ಸರ್ಕಾರದವರು ಕೈಗೊಳ್ಳಲರುವ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

ಅ) ಬಂದಿದೆ.

ಆ) ಸರ್ಕಾರವು ರಿಸರ್ವ್ ಬ್ಯಾಂಕ್ ನಬಾರ್ಡ್ ಹಾಗೂ ಕೇಂದ್ರ ಹಣಕಾಸು ಮಂತ್ರಾಲಯಕ್ಕೆ ಸದರೀ ವಿಷಯದ ಬಗ್ಗೆ ಬ್ಯಾಂಕುಗಳಿಗೆ ಸೂಕ್ತ ಸೂಚನೆಗಳನ್ನು ನೀಡುವಂತೆ ತಿಳಿಸಲಾಗಿದೆ. ಹಾಗೂ ರಾಜ್ಯದ ಜಿಲ್ಲಾ ಪರಿಷತ್ತುಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

ವಿಷಯ: ಕೊಡಗು ಜಿಲ್ಲೆಯಲ್ಲಿರುವ ಸಾರಾಯಿ ಅಂಗಡಿಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1560(2338)

ಶ್ರೀ ಅಪ್ಪಚ್ಚು ರಂಜನ್ (ಸೋಮವಾರಪೇಟೆ):- ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕೊಡಗು ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿ ಎಷ್ಟು ಸಾರಾಯಿ ಅಂಗಡಿಗಳಿವೆ, ಅಧಿಕೃತ ಮತ್ತು ಅನಧಿಕೃತ ಸಾರಾಯಿ ಅಂಗಡಿಗಳೆಷ್ಟು ?

2) ಅಬಕಾರಿ ಕಾನೂನು ರೀತ್ಯ ಗ್ರಾಮದಿಂದ (ಶಾಲೆ, ಆಸ್ಪತ್ರೆ, ದೇವಸ್ಥಾನ, ಬಸ್ ನಿಲ್ದಾಣ) ಎಷ್ಟು ದೂರದಲ್ಲಿ ಸಾರಾಯಿ ಅಂಗಡಿಗಳಿರಬೇಕು?